**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 01.04.2026**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಇ ಪಿ ವಕೀಲರಿಂದ**

1. ಕಿರಣ್ ಕುಮಾರವರು ನನ್ನ ಸಂಬಂದಿಕರು ಹಾಗೂ ಚಿಕ್ಕ ವಯಸ್ಸಿನಿಂದ ಪರಿಚಯಸ್ಥತರು . ಅವರು ನನ್ನ ಸ್ವಂತ ಸಹೋದಾರರಾಗಿರುವುದಿಲ್ಲ. ನನಗೆ ಆರೋಪಿ ನನ್ನ ಅಣ್ಣನ ಕಡೆಯಿಂದ ನನ್ನ ಅಣ್ಣನ ಮದುವೆಯಾಗುವ ಮುಂಚೆಯಿಂದ ಪರಚಯವಿರುತ್ತಾರೆ. ಆರೋಪಿ ಮನೆಗೆ ನಾನು ಹೋಗಿರುವುದಿಲ್ಲ ಸಾಕ್ಷಿಯು ಮುಂದುವರೆದು ಅವರು ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿದ್ದರು ಎಂದು ನುಡಿದರು. ನನ್ನ ಅಣ್ಣನ ಮದುವೆಯ ಸಮಯದಲ್ಲಿ ಆರೋಪಿಯು ಸಾಕಷ್ಟು ಬಾರಿ ಮನೆಗೆ ಬಂದು ಹೋಗಿ ಮಾಡುತ್ತಿದ್ದರು ಅವರು ಮದುವೆಗೆ ಓಡಾಡುತ್ತಿದ್ದರು. ಆರೋಪಿಯ ತಾಯಿಯ ಹೆಸರು ಗೊತ್ತಿಲ್ಲ. ಆರೋಪಿಗೆ ಮದುವೆಯಾಗಿರುವುದಿಲ್ಲ.

2. ನನ್ನ ಅಣ್ಣ ಕಿರಣ್ ಕುಮಾರರವರು ಆರ್ಮಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರು ನ್ಯಾಯಾಲಯಕ್ಕೆ ಬಂದು ಹೋಗಲು ಸಾಧ್ಯವಿರುವುದಿಲ್ಲ ಹಾಗೂ ಹಣ ಕೊಡುವ ಸಮಯದಲ್ಲಿ ನಾನು ಇದ್ದ ಕಾರಣ ನನಗೆ ನನ್ನ ಅಣ್ಣ ಕಿರಣ್ ಕುಮಾರ್ ರವರು ಜಿ ಪಿ ಎ ಯನ್ನು ಕೊಟ್ಟಿರುತ್ತಾರೆ . ಕಿರಣ್ ಕುಮಾರ್ ಮತ್ತು ಆರೋಪಿಯ ನಡುವೆ ಒಂದು ಬಾರಿ ಮಾತ್ರ ಹಣದ ವ್ಯವಹಾರ ಆಗಿರುತ್ತದೆ . ಆರೋಪಿ ನನ್ನ ಅಣ್ಣನ ಬಳಿ ಸಾಲ ತೆಗೆದುಕೊಳ್ಳಬೇಕಾದರೆ ಅಂದರೆ ದಿಃ 29.07.2022 ರಂದು ಒಂದು ಚೆಕ್ ನ್ನು ಕೊಟ್ಟಿರುತ್ತಾರೆ. ನಂತರ ದಿಃ 01.12.2022 ರಂದು ಮತ್ತೊಂದು ಚೆಕ್ ನ್ನು

ನೀಡಿರುತ್ತಾರೆ. ದಿಃ 29.07.2022 ರಂದು ಕೊಟ್ಟಂತಹ ಚೆಕ್ ನ ಮೇಲೆ ಆರೋಪಿ ಯಾವುದೆ ದಿನಾಂಕ ಎಂದು ನಮೂಧಿಸಿರುವುದಿಲ್ಲ. ಆರೋಪಿ ದಿನಾಂಕ 29.07.2022 ರಂದು ಒಂದು ಚೆಕ್ ನ್ನು ನೀಡಬೇಕಾದರೆ ಅದರಲ್ಲಿ ಅವರು ಹಣ ಮತ್ತು ಹೆಸರನ್ನು ಬರೆದು ತಂದಿದ್ದು ನಮ್ಮ ಮುಂದೆ ಸದರಿ ಚೆಕ್ ಗೆ ಸಹಿ ಹಾಕಿ ನಮಗೆ ನೀಡಿರುತ್ತಾರೆ. ಸದರಿ ಚೆಕ್ ನ್ನು ನಾವು ಬ್ಯಾಂಕಗೆ ಮೊದಲನೆ ವಾರ ಡಿಸೆಂಬರ್ ನಲ್ಲಿ ಹಾಜರುಪಡಿಸಿರುತ್ತೇವೆ . ಸದರಿ ಚೆಕ್ ಬ್ಯಾಂಕನಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹದೊಂದಿಗೆ ವಾಪಸು ಆಗಿರುತ್ತದೆ . ಆ ಸಂದರ್ಬದಲ್ಲಿ ಆರೋಪಿಗೆ ಯಾವುದೆ ನೋಟಿಸು ನೀಡಿರುವುದಿಲ್ಲ.

3. ಸದರಿ ಇನ್ನೊಂದು ಚೆಕ್ ನ್ನು ಬ್ಯಾಂಕಗೆ ಹಾಜರುಪಡಿಸಬೇಕಾದರೆ ದಿನಾಂಕವನ್ನು ನನ್ನ ಅಣ್ಣ ಕಿರಣ ಕುಮಾರ್ ರವರು ನಮೂದಿಸಿರುತ್ತಾರೆ. ರೂ 6 ಲಕ್ಷ ಹಣ ಎಂಬುದು ದೊಡ್ಡ ಮೊತ್ತದ ಹಣ ಎಂದರೆ ಸರಿ . ಆರೋಪಿಯು ನನ್ನ ಅಣ್ಣ ಕಿರಣ ಕುಮಾರ್ ರವರ ಬಳಿ ಸಾಲ ಕೊಟ್ಟ 2-3 ದಿನಗಳ ಹಿಂದೆ ಹಣವನ್ನು ಸಾಲವಾಗಿ ಕೇಳಿರುತ್ತಾರೆ. ಸದರಿ ಸಾಲವನ್ನು ಕೇಳಿದ ದಿನಾಂಕದಿಂದ ಪೂರ್ವ ದಿನಾಂಕದ ಮದ್ಯೆ ನನ್ನ ಅಣ್ಣ ಕಿರಣ ಕುಮಾರರವರು ಯಾವುದೆ ಹಣವನ್ನು ಬ್ಯಾನಕನಿಂದ ಡ್ರಾ ಮಾಡಿರುವುದಿಲ್ಲ. ದಿಃ 29.07.2022 ರಂದು ನನ್ನ ಅಣ್ಣ ಕಿರಣ ಕುಮಾರ ರವರ ಬಳಿ ರೂ 6 ಲಕ್ಷ ಹಣ ಇತ್ತು ಎಂದು ತೋರಿಸಲು ಯಾವುದಾದರು ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದರು. ನನ್ನ ಅಣ್ಣ ಕಿರಣ ಕುಮಾರ್ ರವರಿಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಸಮಾರು 20 ವರುಷಗಳಿಂದ ಜ್ಞಾನ ಇರುತ್ತದೆ . ನನ್ನ ಅಣ್ಣ ಕಿರಣ ಕುಮಾರ್ ರವರಿಗೆ ರೂ

6 ಲಕ್ಷ ಹಣ ಕೊಟ್ಟು ಅದಕ್ಕೆ ಪೂರಕವಾಗಿ ದಾಖಲೆ ಪಡೆಯಬೇಕೆಂಬ ಜ್ಞಾನ ಇದೆಯಾ ಎಂದರೆ ಸಾಕ್ಷಿಯು ಅದಕ್ಕೆ ಚೆಕ್ ನ್ನು ಪಡೆದಿರುತ್ತೇವೆ ಎಂದು ನುಡಿದರು.

4. ಸದರಿ ಚೆಕ್ ನ್ನು ಹೊರತುಪಡಿಸಿ ನನ್ನ ಅಣ್ಣ ಕಿರಣ ಕುಮಾರ್ ರವರ ಬಳಿ ಬೇರೆ ಯಾವುದೆ ದಾಖಲಾತಿ ಇರುವುದಿಲ್ಲ . ನಾನು ಕ್ರಿಡೆಟ್ ಆಕ್ಸಿಸ್ ಗ್ರಾಮೀನ್ ಲಿಮಿಟೆಡ್ ಕಂಪನಿಯಲ್ಲಿ ಅಸಿಸ್ಟಂಟ್ ಬ್ಯಾಂಕ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುತ್ತೇನೆ . ನಾನು ಸುಮಾರು ಐದುವರೆ ವರುಷದಿಂದ ಸದರಿ ಕೆಲಸವನ್ನು ಮಾಡುತ್ತಿರುತ್ತೇನೆ . ದಿಃ 29.07.2022 ರಂದು ನಾನು ನನ್ನ ಅಣ್ಣನ ಮನೆಯಲ್ಲೆ ವಾಸವಿದ್ದೆ . ನಾನು 2022 ಇಸವಿಯಿಂದ 2023 ಡಿಸೆಂಬರ್ ರವರೆಗೆ ನನ್ನ ಅಣ್ಣ ಕಿರಣ ಕುಮಾರ್ ರವರು ಮನೆಯಲ್ಲೆ ವಾಸವಿರುತ್ತೇನೆ . ಆರೋಪಿಯು ಸದರಿ ಪ್ರಶ್ನೆತ ಚೆಕ್ ನ್ನು ನನ್ನ ಅಣ್ಣನಿಗೆ ಡಿಸೆಂಬರ್ ಮೊದಲನೆ ವಾರದಿಂದು ಹುದುಗೂರಿನಲ್ಲಿ ಕೊಡಬೇಕಾದರೆ ನನ್ನ ಅಣ್ಣನ ಮನೆಯಲ್ಲೆ ವಾಸವಿದ್ದೆ .

5. ನಾನು ನನ್ನ ಕಂಪನಿಯಲ್ಲಿ ಪೀಲ್ಡ ವರ್ಕ್ ಕೆಲಸ ಜಾಸ್ತಿ ಮಾಡುತ್ತೇನೆ . ದಿಃ 29.07.2022 ರಂದು ಮತ್ತು 01.12.2022 ರಂದು ನಾನು ಕಚೇರಿಯಲ್ಲಿ ಗೈರು ಹಾಜರಾದ ಬಗ್ಗೆ ಹಾಜರಾತಿ ರಿಜಿಸ್ಟರನ್ನು ಹಾಜರುಪಡಿಸಲು ಸಾಧ್ಯವಿಲ್ಲ ಏಕೆಂದರೆ ಆ ದಿನಗಳು ನಾನು ಕಚೇರಿಯ ಕೆಲಸ ಮಾಡುತ್ತಿರುತ್ತೇನೆ . ದೇಶಿಯ ಸೇನೆಯಲ್ಲಿ ನನ್ನ ಅಣ್ಣ ಕೆಲಸ ಮಾಡುತ್ತಿದ್ದು ಎಂದು ತಿಳಿಸಿದ್ದು ಅವರು ಊರಿಗೆ ಬರಬೇಕಾದರೆ ಅವರು ಅನುಮತಿ ಪಡೆದುಕೊಂಡೆ ಬರಬೇಕು ಎಂದರೆ ಸರಿ . ದಿಃ 29.07.2022 ರಂದು

ಹಾಗೂ 01.12.2022 ರಂದು ಪಿರ್ಯಾದಿದಾರರು ಆ ರೀತಿ ಅನುಮತಿ ಪಡೆದು ರಜೆ ಮೇಲೆ ಬಂದ ಬಗ್ಗೆ ದಾಖಲಾತಿ ಹಾರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸುತ್ತೇನೆ ಎಂದು ನುಡಿದರು. ಆರೋಪಿ ನೀಡಿದ ಎರಡು ಚೆಕ್ ಗಳನ್ನು ನನ್ನ ಅಣ್ಣ ಕಿರಣ ಕುಮಾರವರೆ ಬ್ಯಾಂಕಗೆ ಹಾಜರುಪಡಿಸಿರುತ್ತಾರೆ .

6. ಆರೋಪಿಗೆ ಕಳುಹಿಸಿ ಕಾನೂನು ತಿಳುವಳಿಕೆ ಪತ್ರದ ಮಾಹಿತಿಯನ್ನು ಪಿರ್ಯಾದಿದಾರರು ಕೊಟ್ಟಿರುತ್ತಾರೆ . ಅದೆ ರೀತಿ ಬ್ಯಾಂಕನಿಂದ ಬಂದಂತಹ ಹಿಂಬರಹವನ್ನು ಪಿರ್ಯದಿದಾರರು ಪಡೆದಿರುತ್ತಾರೆ . ಪಿರ್ಯಾದಿದಾರರು ಎಷ್ಟು ಅವಧಿಯ ಮೇಲೆ ರಜೆಕ್ಕೆ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಲ ಪಡೆದಿದ್ದಾರೆ ಎಂದು ಹೇಳುವ ದಿನಾಂಕಕ್ಕೆ , ಸಾಲ ಕೊಡುವ ದಿನಾಂಕಕ್ಕೆ ಮತ್ತು ಚೆಕ್ ಗಳನ್ನು ಬ್ಯಾಂಕಗೆ ಹಾಜರುಪಡಿಸುವ ದಿನಾಂಕಕ್ಕೆ ಮತ್ತು ನೋಟಿಸನ್ನು ನೀಡುವ ದಿನಾಂಕಕ್ಕೆ ಪಿರ್ಯಾದಿದಾರರು ಸೇವೆಯಿಂದ ರಜೆಯಲ್ಲಿ ಇದ್ದರಾ ಎಂದರೆ ಸಾಕ್ಷಿಯು ಪಿರ್ಯಎಾದಿದಾರರು ದುಡ್ಡನ್ನು ಆರೋಪಿ ಗೆ ಕೊಡುವ ಸಮಯದಲ್ಲಿ ರಜೆಯಲ್ಲಿದ್ದರು ಮತ್ತು ಡ್ಯೂಟಿಗೆ ಹೋಗಿ ನಂತರ ಹಣವನ್ನು ವಾಪಸು ಪಡೆಯುವುದಕೋಸ್ಕರ ಮತ್ತು ಬ್ಯಾಂಕಗೆ ಚೆಕ್ ಗಳನ್ನು ಹಾಜರುಪಡಿಸುವ ಸಮಯದಲ್ಲಿ ಮತ್ತು ನೋಟಿಸನ್ನು ನೀಡುವ ಸಮಯದಲ್ಲಿ ರಜೆಯಲ್ಲಿದ್ದರು ಎಂದು ನುಡಿದರು. ಯಾವ ಯಾವ ದಿನಾಂಕಕ್ಕೆ ಪಿರ್ಯಾದಿದಾರರು ರಜೆಯನ್ನು ಪಡೆದು ಬಂದಿದ್ದರು ಎಂದರೆ ಸಾಕ್ಷಿಯು ಯಾವ ಯಾವ ದಿನಾಂಕ ಎಂದು ನನಗೆ ಗೊತ್ತಿಲ್ಲ ಆದರೆ ಈ ಮೇಲೆ ತಿಳಿಸಿದ ದಿನಗಳು ಊರಿನಲ್ಲಿ ಇದ್ದರು ಎಂದು ನುಡಿದರು.

7. ವಾಸ್ತವವಾಗಿ ಈ ಮೇಲೆ ಹೇಳಿಂದ ದಿನಗಳು ಪಿರ್ಯಾದಿದಾರರು ಯಾವುದೆ ರಜೆಯನ್ನು ಪಡೆಯದೆ ಇರುವ ಕಾರಣ ಯಾವುದೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಬೇಕಾದಲ್ಲಿ ಈಗ ಹಾಜರುಪಡಿಸುತ್ತೇನೆ ಎಂದು ನುಡಿದರು. ಅದೆ ರೀತಿ ಪಿರ್ಯಾದಿದಾರರು ಮತ್ತು ಆರೋಪಿಯ ನಡುವೆ ನಡೆದಿದೆ ಎಂದು ಹೇಳುವ ವ್ಯವಹಾರಕ್ಕೆ ನಾನು ಪ್ರತ್ಯಕ್ಷದರ್ಶಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. 2022 ಮತ್ತು ಡಿಸೆಂಬರ್ 2023 ರವರಗೆ ಹುದುಗೂರಿನಲ್ಲಿ ವಾಸವಿದ್ದೆ ಎಂದು ಹೇಳಲು ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದರು. ಪಿರ್ಯಾದಿದಾರರು ನನಗೆ ಅಧಿಕಾರ ಪತ್ರವನ್ನು ಬರೆದು ಕೊಡುವ ಸಂದರ್ಭದಲ್ಲಿ ನಾನು ಹಾಜರು ಇದ್ದೆ. ಅಧಿಕಾರ ಪತ್ರವನ್ನು ನಾನು ಮತ್ತು ಪಿರ್ಯಾದಿದಾರರು ಹೇಳಿ ಬರೆಸಿರುತ್ತೇವೆ . ಸದರಿ ನಿಪಿ 1 ರಲ್ಲಿ ನಾನು ಹುದುಗೂರು ಗ್ರಾಮದಲ್ಲಿ ವಾಸವಿದ್ದೆ ಎಂದು ಬರೆಸಿರುವುದಿಲ್ಲ. ನಿಪಿ 1 ರಲ್ಲಿ ಬನ್ನೂರು ಅಂಚೆ ,ಅರಕಲಗೂಡು ತಾಲೂಕು , ಕಾಡನೂರು ಕೊಪ್ಪಲು ಗ್ರಾಮ , ಹಾಸನ ಜಿಲ್ಲೆ ಯಲ್ಲಿ ವಾಸವಿರುತ್ತೇನೆ ಎಂದು ನಮೂದಾಗಿರುತ್ತದೆ ಎಂದರೆ ಸರಿ .

8. ನಿಪಿ 1 ರಲ್ಲಿ ಪಿರ್ಯಾದಿದಾರರು ಮತ್ತು ಆರೋಪಿಯ ನಡುವೆ ಆದಂತಹ ವ್ಯವಹಾರದಲ್ಲಿ ನಾನೆ ಪ್ರತ್ಯಕ್ಷವಾಗಿ ಹಾಜರು ಇದ್ದೆ ಎಂದು ಉಲ್ಲೇಖ ಇರುವುದಿಲ್ಲ ಎಂದರೆ ಸರಿ . ನಿಪಿ 4 ರಲ್ಲಿ ನಿಪಿ 1 ರ ಬಗ್ಗೆ ಎಲ್ಲೂ ಸಹ ಪಿರ್ಯಾದಿದಾರರು ನನಗೆ ಅದಿಕಾರ ಪತ್ರವನ್ನು ಕೊಟ್ಟ ಬಗ್ಗೆ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ . ನಿಪಿ 4 ರಲ್ಲಿ

ಪಿರ್ಯಾದದಿದಾರರ ಮತ್ತೆ ಆರೋಪಿಯ ನಡುವೆ ಆದತಂತಹ ವ್ಯವಹಾರದಲ್ಲಿ ನಾನು ಪ್ರತ್ಯಕ್ಷದರ್ಶಿ ಎಂದು ಉಲ್ಲೇಖ ಇರುವುದಿಲ್ಲ ಎಂದರೆ ಸರಿ .

9. ದೂರನ್ನು ದಾಖಲು ಮಾಡುವುದಕ್ಕೆ ಪಿರ್ಯಾದಿದಾರರೆ ಮಾಹಿತಿ ನೀಡಿರುತ್ತಾರೆ. ದೂರು ದಾಖಲಿಸುವ ಸಂದರ್ದಲ್ಲಿ ಪಿರ್ಯಾದಿದರರು ಊರಿಗೆ ಬಂದಿರುತ್ತಾರೆ. ನಾನು ದೂರನ್ನು ನಾವೆ ಬರೆಸಿರುವ ಕಾರಣ ಓದಿ ತಿಳಿದುಕೊಂಡಿರುವುದಿಲ್ಲ. ದೂರಿನಲ್ಲಿ ನಾನು ಪ್ರತ್ಯಕ್ಷದರ್ಶಿಯಾಗಿದ್ದೆ ಮತ್ತು ಈ ಪ್ರಕರಣ ಬಗ್ಗೆ ನನಗೆ ವೈಯಕ್ತಿಕ ಜ್ಞಾನ ಇದೆ ಎಂದು ಎಲ್ಲೂ ಬರೆಸಿರುವುದಿಲ್ಲ . ವಾಸ್ತವವಾಗಿ ಯಾವುದೆ ವೈಯಕ್ತಿಕ ಜ್ಞಾನ ಇಲ್ಲದ ಕಾರಣ ನಿಪಿ 1 ರಲ್ಲಿ ನಿಪಿ 4 ರಲ್ಲಿ ಮತ್ತು ದೂರಿನಲ್ಲಿ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕಾನೂನಾತ್ಮಕವಾಗಿ ಪಿರ್ಯಾದಿದಾರನ್ನು ಪ್ರತಿನಿಧಿಸುವ ಮತ್ತು ಈ ಪ್ರಕರಣದ ಯಾವುದೆ ಸಾಕ್ಷಿಯನ್ನು ನೀಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

10. ಆರೋಪಿ ಮೂಲತಃ ತಾಕೇರಿಯಲ್ಲಿ , ಸೋಮವಾರಪೇಟೆ ತಾಲೂಕಿನಲ್ಲಿ ವಾಸವಿದ್ದರು. ಆರೋಪಿ ಯು ಚಂದಾಣಿ ಬಾಣೆಯಲ್ಲಿ ವಾಸವಿರುತ್ತಾರೆ. ಸದರಿ ವ್ಯವಹಾರ ಆಗಿದೆ ಎಂದು ಹೇಳುವ ಸಮಯದಲ್ಲಿ ಪಿರ್ಯಾದಿದಾರರು ಆರೋಪಿಯ ವಿಳಾಸದ ಖಾತ್ರಿಗಾಗಿ ಯಾವುದೆ ದಾಖಲಾತಿಗಳನ್ನು ಪಡೆದಿರುವುದಿಲ್ಲ. ಆರೋಪಿಗಾಗಲಿ ಅಥವಾ ಅವರ ತಂದೆಗಾಗಲಿ ತಾಕೇರಿ ಗ್ರಾಮದಲ್ಲಿ ಯಾವುದೆ ವಾಸದ ಮನೆ ಮತ್ತು ಜಾಗ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. **ಸಾಕ್ಷಿಗೆ ಆರೋಪಿಯ ಆದಾರ್ ಕಾರ್ಡನ್ನು ತೋರಿಸಿದ್ದು ಸಾಕ್ಷಿಯು ಸದರಿ ಆದಾರ ಕಾರ್ಡನ್ನು ನೋಡಿ ಗುರುತಿಸಿದ ಮೇರೆಗೆ ನಿಡಿ 1**

**ಎಂದು ಗುರುತಿಸಲಾಯಿತು.** ಸದರಿ ದಾಖಲಾತಿಯ ಪ್ರಕಾರ ಆರೋಪಿಯು ಗೊಂದಿಬಸವನಹಳ್ಳಿ , ಕುಶಾಲನಗರದ ವಾಸಿ ಎಂದರೆ ಸರಿ . ಸದರಿ ಪ್ರಕರಣದಲ್ಲಿ ಕಳುಹಿಸಿದ ನೋಟಿಸು ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯು ಅದನ್ನು ಪಡೆದಿರುವುದಿಲ್ಲ ಎಂದು ನುಡಿದರು. ಸಾಮಾನ್ಯವಾಗಿ ಅಂಚೆ ಲಕೋಟೆ ತಪ್ಪು ವಿಳಾಸಕ್ಕೆ ಹೋದರೆ ಅಂತಹ ವಿಳಾಸದಾರರು ಅದನ್ನು ತಿರಸ್ಕರಿಸುತ್ತಾರೆ ಎಂದರೆ ಸರಿ . ವಾಸ್ತವವಾಗಿ ನೋಟಿಸನ್ನು ತಪ್ಪು ವಿಳಾಸಕ್ಕೆ ಕಳುಹಿಸಿದ ಕಾರಣ ಅದನ್ನು ಆ ವಿಳಾಸದವರು ತಿರಸ್ಕರಿಸುತ್ತಾರೆ ಎಂದರೆ ಸಾಕ್ಷಿಯ ಅದನ್ನು ಆರೋಪಿಯೆ ತಿರಸ್ಕಸುತ್ತಾರೆ ಎಂದು ನುಡಿದರು.

11. ಆರೋಪಿಯು ಪಿರ್ಯಾದಿದಾರರು ಹಣವನ್ನು ಅವರ ಪರ್ಸನಲ್ ವ್ಯವಹಾರಕ್ಕೊಸ್ಕರ ಪಡೆದಿರುತ್ತಾರೆ . 2022 ರಲ್ಲಿ ರೂ 6 ಲಕ್ಷ ಹಣವನ್ನು ನಗದು ಮುಖಾಂತರ ವ್ಯವಹರಿಸುವುದು ಕಾನೂನು ಮುಖಾಂತರ ಅಸಿಂದು ಎಂದರೆ ಸರಿ . ಪಿರ್ಯಾದಿದಾರರುರಿಗೆ ಹಣವನ್ನು ಬ್ಯಾಂಕನ ಮುಖಾಂತರ ವ್ಯವಹರಿಸಲು ನಾನು ಯಾವುದೆ ಸಲಹೆಯನ್ನು ನೀಡಿರುವುದಿಲ್ಲ. ಪಿರ್ಯಾದಿದಾರರ ಹೆಸರಿನಲ್ಲಿ ಆದಾಯ ಬರುವಂತಹ ಯಾವುದೆ ಆಸ್ತಿ ಅವರ ಹೆಸರಿನಲ್ಲಿ ಇಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಆದರೆ ಅವರು ವ್ಯವಸಾಯ ಮಾಡುತ್ತಾರೆ ಎಂದು ನುಡಿದರು. ಪಿರ್ಯಾದಿದಾರರು ಆದಾಯ ತೆರಿಗೆ ಪಾವತಿ ಮಾಡುತ್ತಾರಾ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದರು. 2022 ನೆ ಇಸವಿಯಲ್ಲಿ ಪಿರ್ಯಾದಿದಾರರು ರೂ 6 ಲಕ್ಷ ಹಣವನ್ನು ಏಕಕಾಲದಲ್ಲಿ ತೆಗೆದಿರುವ ಬಗ್ಗೆ ಮಾಹಿತಿ ಇದೆಯಾ ಎಂದರೆ

ಸಾಕ್ಷಿಯು ಪಿರ್ಯಾದಿದಾರರುರಿಗೆ ಒಂದು ಲಕ್ಷದ ಮೇಲ್ಪಟ್ಟ ಸಂಬಳ ಇದ್ದು ತೆಗೆದಿರಬಹುದು ಎಂದು ನುಡಿದರು. 2022 ರಲ್ಲಿ ಪಿರ್ಯಾದಿದಾರರರಿಗೆ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ಸಂಬಳ ಇದೆ ಎಂದು ತೋರಿಸಲು ಯಾವುದಾದರು ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ಬೇಕಾದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿದರು.

**ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ